ಮೇಲೆ ಈ ಆಕರ್ಷಣೆ ತೀವ್ರವಾಗಿದೆ. ನಾಲ್ಕೆಂಟು ಸಾಲು ಬರೆದು ಫೇಸ್‌ಬುಕ್ಕಿಗೋ ವಾಟ್ಸ್‌ಆ್ಯಪಿಗೋ ಅಪ್ಲೋಡ್ ಮಾಡಿದರೇ ತೀರಿತು ಪ್ರಸಾರ, ಪ್ರಚಾರ, ಓದುಗ, ಪ್ರತಿಕ್ರಿಯೆ ಎಲ್ಲವೂ ಅಲ್ಲಿ ಲಭ್ಯ. ಬಲು ಸುಲಭ. ಜನಪ್ರಿಯ ಕೂಡ. ಯಾವುದೇ ಸಾಹಿತ್ಯ ಮುಖ್ಯವಾಗಿ ಪ್ರಸಾರವಾಗ್ಬೇಕು, ಜನರನ್ನ ತಲುಪ್ಬೇಕು. ಕಾವ್ಯಕ್ಕೆ ಈ ಎರಡೂ ಸುಲಭ. ತುಂಬಾ ವೇಗವಾಗಿ ವ್ಯಾಪಿಸುತ್ತೆ. ಕಾರಣ ವೇದಿಕೆಗಳು, ಅವಕಾಶಗಳು ವಿಪುಲವಾಗಿ ಲಭ್ಯವಿರುವುದರಿಂದ. ಈ ಎಲ್ಲಾ ಕಾರಣಗಳಿಂದ ಮೇಲ್ನೋಟಕ್ಕೆ ಕಾವ್ಯ ಹೆಚ್ಚು ಸಕ್ರಿಯವಾಗಿದ್ದಂತೆ ಕಂಡರೂ ಅದು ಕಾಲುಭಾಗ ಮಾತ್ರ ಅನಿಸುತ್ತೆ ನಂಗೆ. ಉಳಿದದ್ದು ಗದ್ಯವೇ. ಗದ್ಯದ ಎಲ್ಲಾ ಪ್ರಕಾರಗಳಲ್ಲೂ ಕಥೆ, ಕಾದಂಬರಿ, ಪ್ರಬಂಧ, ವಿಡಂಬನೆ, ವಿಮರ್ಶೆ, ನಾಟಕ, ಪ್ರವಾಸಕಥನ ಇತ್ಯಾದಿಗಳಲ್ಲಿ ಸಾಕಷ್ಟು ಕೃಷಿ ನಡೆದಿದೆ. ಪುಸ್ತಕಗಳು ಪ್ರಕಟವಾಗ್ತಿವೆ. ಇನ್ನು ನನ್ನಂತವಳಿಗೆ ಕಾವ್ಯ ಕೈಗೆಟುಕದ್ದು. ಬರೆಯುವ ಸುಖ ನಂಗೆ ಗದ್ಯದಲ್ಲೇ. ಯಾವುದೋ ಒಂದು ಘಟನೆ, ಒಂದು ಮಾತು, ಒಂದು ಭಾವ, ಒಂದು ಪರಿಸರದ ಸೀದಾ ಅನುಭವ ದಕ್ಕುತ್ತೆ ಕಥೆ ಬರೆಯುತ್ತ ಬರೆಯುತ್ತ. ಹುಟ್ಟೋ ಗಳಿಗೆಯಲ್ಲಿ ಎಲ್ಲಾ ಮಸುಕುಮಸುಕು ತುಣುಕುತುಣುಕು ಕಂಡರೂ ಮುಂದುವರಿದಂತೆ ನಿಧಾನವಾಗಿ ಮಸುಕು ಹರಿದು ತುಣುಕುಗಳೆಲ್ಲ ಒಂದೊಂದಾಗಿ ಹೆಣೆದುಕೊಳ್ಳುತ್ತ ಹೋಗಿ ನಮ್ಮೊಳಗಿನ ತಾಕಲಾಟಗಳನ್ನೆಲ್ಲಾ ಮೆಟ್ಟಿ ಮೀರಿ ಬೆಳೆಯುವ ಕ್ರಮದಲ್ಲಿನ ಒಂದೊಂದು ಗಳಿಗೆ ಆ ಗಳಿಗೆ ನನ್ನೊಳಗೆ ಮೂಡಿಸುವ ಧನ್ಯತೆಗೆ ನಾನ್ಯಾವತ್ತೂ ಶರಣು.

◆ ನಗರದಲ್ಲಿ ಬೆಳೆದ ಸುಶಿಕ್ಷಿತರಾಗಿದ್ದರೂ ದಲಿತರಿಗೆ ಇರುವ ಸಾಮಾಜಿಕ ತಾರತಮ್ಯಕ್ಕೆ ನಗರ ಗ್ರಾಮಗಳ ವ್ಯತ್ಯಾಸವಿಲ್ಲ. ಈ ಹಿನ್ನಲೆಯಲ್ಲಿ ದಲಿತ ಸಮುದಾಯದ ಕತೆಗಾರ್ತಿಯಾಗಿ ನಿಮ್ಮ ಅನಿಸಿಕೆ?

ಇಲ್ಲಿ ಎಲ್ಲಾ ದಲಿತರೂ ನೀವು ಕೇಳುವಂತಹ ತಾರತಮ್ಯಕ್ಕೆ, ಶೋಷಣೆಗೆ ಒಳಗಾಗಲ್ಲ. ನಿಜದಲ್ಲಿ ಶೋಷಣೆಗೆ ಒಳಗಾಗೋರು ಬೇರೇನೆ. ಅಮಾನವೀಯವಾದ ತಾರತಮ್ಯ, ಹಿಂಸೆ, ಕೌರ್ಯಗಳಿಗೆ ಗುರಿಯಾಗೋರು ಅವರು ಮನುಷ್ಯರೇ ಅಲ್ಲವೆಂಬಂತೆ ನಡೆಯಿಸಿಕೊಳ್ಳಲ್ಪಟ್ಟವರು. ಇದಕ್ಕೆ ನಗರ ಗ್ರಾಮಗಳ ವ್ಯತ್ಯಾಸವಿಲ್ಲ ಅನ್ನೋದು ಖಂಡಿತ ಹೌದು. ಯಾಕಂದ್ರೆ ಈ ಒಂದು ವಿಷಯದಲ್ಲಿ ಅವರೆಲ್ಲರ ಯೋಚನಾ ಕ್ರಮ ಒಂದೇ. ಓರ್ವ ವಿದ್ಯಾವಂತ–ಅವಿದ್ಯಾವಂತ, ಓರ್ವ ಶ್ರೀಮಂತ–ಬಡವ, ಓರ್ವ ಅಧಿಕಾರಿ–ಕೂಲಿ, ಓರ್ವ ಪಂಡಿತ–ಪಾಮರ, ಓರ್ವ ಜ್ಞಾನಿ–ಅಜ್ಞಾನಿ, ಓರ್ವ ಹಳ್ಳಿಯವ–ದಿಲ್ಲಿಯವ ಜಾತಿ ತಾರತಮ್ಯ ಇಲ್ಲಾ ಅಸ್ಪೃಶ್ಯತೆ ಆಚರಣೆ ವಿಷಯಕ್ಕೆ ಬಂದಾಗ ಈ ಎಲ್ಲರ ಯೋಚನೆಯ ಕ್ರಮವೂ ಒಂದೇ ಯೋಚನಾ ಮಟ್ಟವೂ ಒಂದೇ. ಹಳ್ಳಿಗಳಿಗಿಂತ ನಗರಗಳಲ್ಲಿ ಇದು ಇನ್ನೂ ಹೆಚ್ಚಾಗಿ ಥಾಳಾಗಿ ವ್ಯಾಪಿಸ್ತಾ ಇದೆ. ಹಳ್ಳಿಗಳಲ್ಲಿ ನೇರವಾಗಿದ್ರೆ ನಗರಗಳಲ್ಲಿ ವಿದ್ಯಾವಂತರಲ್ಲಿ ಗೋಪ್ಯವಾಗಿರುತ್ತೆ. ನೂರಲ್ಲ ಸಾವಿರವಲ್ಲ ಯುಗಯುಗಗಳೇ ಕಳೆದ್ರೂ ಇದು ತೊಲಗೋದಿಲ್ಲ ಅನ್ನೋ ಮಟ್ಟಕ್ಕಿದೆ. ಮನುಷ್ಯ ಹೆಚ್ಚೆಚ್ಚು ಸುಶಿಕ್ಷಿತನಾಗ್ತಾ ಹೋದಂಗೆ... ಆಧುನಿಕನಾಗ್ತಾ ಹೋದಂಗೇ ಇದು ಜಾಸ್ತಿ ಆಳಕ್ಕಿಳಿದು ವಿರಾಟ ರೂಪ ತಾಳ್ತಾ ಇರೋದನ್ನ ನೋಡ್ತಿದೀವಿ. ಮನುಷ್ಯತ್ವವೇ ಮಾಯವಾಗ್ತಿದೆ. ಎಲ್ಲಿಯವರೆಗೆ ಈ ಮನಃಸ್ಥಿತಿಯಲ್ಲಿ, ಈ ಯೋಚನೆಯ ಮಟ್ಟದಲ್ಲಿ ಸುಧಾರಣೆ ಕಂಡು ಬರೋದಿಲ್ವೋ ಅಲ್ಲಿತನ ಏನೇ ಬರೆದ್ರೂ ಎಷ್ಟೇ ಬಡ್ಕಂಡ್ರೂ ಇದಿಷ್ಟೇ.

◆ ಸಂವಿಧಾನ ಹಲವು ಮೂಲಭೂತ ಹಕ್ಕನ್ನು ಕಲ್ಪಿಸಿದ್ದರೂ ಈ ಜಾಗತೀಕರಣದ ದಿನಮಾನಗಳಲ್ಲಿ ದಲಿತ ಯುವ ಸಮುದಾಯ ನಿರೀಕ್ಷಿತ ಯಶಸ್ಸನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಎಂಬ ವಾದವಿದೆ. ಈ ಬಗ್ಗೆ ನಿಮ್ಮ ಅನಿಸಿಕೆ.